<table>
<tr><td></td><td></td><td>ಬಗ್ಗೆ, ವಿನಾಯಿತಿಗಳ ಬಗ್ಗೆ ಸಾಕಷ್ಟು ಪ್ರಚಾರಗಳನ್ನು ಮಾಡಲಾಗಿರುತ್ತದೆ.</td></tr>
<tr><td>ಇ)</td><td>ಪ್ರಸ್ತುತ ಹಣಕಾಸು ವರ್ಷದಲ್ಲಿ ಎಲ್ಲಾ ರೀತಿಯ ಒಟ್ಟು ತೆರಿಗೆ ಬೇಡಿಕೆ ಎಷ್ಟು; ಇದುವರೆಗಿನ ಪ್ರಗತಿಯೆಷ್ಟು; ರಾಜ್ಯದ ಹಲವು ಜಿಲ್ಲೆಗಳಲ್ಲಿ ತೆರಿಗೆ ಬಾಕಿ ಹೆಚ್ಚಾಗಿರಲು ಕಾರಣಗಳೇನು;</td><td><ul>
<li>ಪ್ರಸ್ತುತ ಹಣಕಾಸು ವರ್ಷದ ಒಟ್ಟು ತೆರಿಗೆ ಬೇಡಿಕೆ 1602.56 ಇದುವರೆಗೂ ₹ 1201 ಕೋಟಿ ತೆರಿಗೆ ವಸೂಲಿ ಮಾಡಲಾಗಿರುತ್ತದೆ.</li>
<li>ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಇಲಾಖಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಗಳ ನಿರ್ದೇಶನದನ್ವಯ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ವಸೂಲಾತಿ ಆಂದೋಲನಗಳನ್ನು ವಿನೂತನವಾಗಿ ಹಮ್ಮಿಕೊಂಡು ಮಾಹಿತಿ, ಶಿಕ್ಷಣ, ಸಂವಹನದ (IEC) ಮೂಲಕ ತೆರಿಗೆ ವಸೂಲಾತಿಗೆ ಕ್ರಮವಹಿಸಲಾಗುತ್ತಿರುತ್ತದೆ.</li>
<li>ಇಲಾಖಾಧಿಕಾರಿಗಳ ನಿರ್ದೇಶನದ ಮೇರೆಗೆ ತೆರಿಗೆ ವಸೂಲಾತಿ ಕ್ರಮಗಳನ್ನು ಅನುಸರಿಸಲಾದ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ಸಂಗ್ರಹ ಉತ್ತಮವಾಗಿರುತ್ತದೆ.</li>
</ul></td></tr>
<tr><td>ಈ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿರುವ ಮೊಬೈಲ್ ಟವರ್‌ಗಳಿಂದ ಬರಬೇಕಾದ ತೆರಿಗೆ ಬಾಕಿ ಎಷ್ಟು; ಮೊಬೈಲ್ ಟವರ್‌ಗಳು, ಕೃಷಿ ಜಾಗದಲ್ಲಿರುವ ಮನೆಗಳ / ಕಟ್ಟಡಗಳು, ಇನ್ನಿತರ ಸಂಸ್ಥೆ ಮತ್ತು ವಾಣಿಜ್ಯ ವ್ಯವಹಾರಗಳನ್ನು ನಿಯಮಾನುಸಾರ ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ, ಸರ್ಕಾರದ ನೀತಿ ಏನು; ಇವುಗಳಿಂದ ಪ್ರಸ್ತುತ ಬಾಕಿ ಉಳಿದಿರುವ ತೆರಿಗೆ ಸಂಗ್ರಹಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>
<table>
<tr><th>ಕ.ಸಂ</th><th>ಜಿಲ್ಲೆಯ ಹೆಸರು</th><th>ಮೊಬೈಲ್ ಟವರ್‌ಗಳಿಂದ ಬರಬೇಕಾದ ತೆರಿಗೆ ಬಾಕಿ</th></tr>
<tr><td>1</td><td>ದಕ್ಷಿಣಕನ್ನಡ</td><td>81,43,540/-</td></tr>
<tr><td>2</td><td>ಉಡುಪಿ</td><td>2,47,74,014/-</td></tr>
</table>
<ul>
<li>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆದರ ಮತ್ತು ಶುಲ್ಕಗಳು) ನಿಯಮಗಳು, 2025 ರ ಅನ್ವಯ ಮೊಬೈಲ್ ಟವಗರ್‌ಗಳು, ಕೃಷಿ ಜಾಗದಲ್ಲಿರುವ ಮನೆಗಳ/ಕಟ್ಟಡಗಳು, ಇನ್ನಿತರ ಸಂಸ್ಥೆ ಮತ್ತು ವಾಣಿಜ್ಯ ವ್ಯವಹಾರಗಳನ್ನು ನಿಯಮಾನುಸಾರ ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ ತಿಳಿಸಲಾಗಿದೆ.</li>
<li>ಮೇಲ್ಕಂಡ ನಿಯಮಗಳ ಅನ್ವಯ ಪ್ರಸ್ತುತ ಬಾಕಿ ಉಳಿದಿರುವ ತೆರಿಗೆಯನ್ನು ಸಂಗ್ರಹಿಸಲು ತೆರಿಗೆ ಸಂಗ್ರಹಣೆ ಅಭಿಯಾನವನ್ನು ಕೈಗೊಳ್ಳಲು ಸಭೆಗಳ ಮೂಲಕ ನಿರ್ದೇಶನ ನೀಡಲಾಗಿರುತ್ತದೆ.</li>
</ul></td></tr>
<tr><td>ಉ)</td><td>ಪ್ರತಿ ಗ್ರಾಮ ಪಂಚಾಯತಿಗೆ ಕನಿಷ್ಠ ರೂ.1 ಕೋಟಿ ವಾರ್ಷಿಕ ಅನುದಾನ ನೀಡುವ ಹಾಗೂ ಆರ್ಥಿಕ ಸ್ವಾವಲಂಬನೆಯನ್ನು ಹೆಚ್ಚಿಸಲು ಮತ್ತು ತೆರಿಗೆ ಸಂಗ್ರಹವನ್ನು</td><td>(ಅನುಬಂಧದಲ್ಲಿ ಲಗತ್ತಿಸಿದೆ.)
<ul>
<li>ತೆರಿಗೆ ಸಂಗ್ರಹವನ್ನು ಸುಧಾರಿಸಲು 2025-</li>
</ul></td></tr>
</table>

